Regd No B G 155

ಸತ್ಯವಾದಿ

24—9—1965

49th Year
Satyavadi
DAILY
MYSORE 4

ಸಂಸ್ಥಾಪಕರು — ಅರವಿಸೆ ಸಿಂಸ್ಕೇದಾರ್ ಎಂ ವಿ ಶುಬ್ಬರಾಯುರು

ಸಂಪಾದಕರು — ಧರ್ಮಪ್ರಚಾರನಿರತ ಎಂ ಎಸ್ ಕೃಷ್ಣರಾವ್

2 ಪೈಸೆ

ಪೂರ್ಣ ಗುಣವಾಗದಿದ್ದಲ್ಲಿ ಹಣ ವಾಪಸ್

ಕೇವಲ 15 ದಿನಗಳಲ್ಲಿ ಪೂರ್ಣ ನಿಶ್ಯಕ್ತಿಗೆಖಾತ್ರಿಯಾದ ಗುಣ : ಯೌವನದಲ್ಲಿಯೆ, ಮುಪ್ಪಾದಂತೆ ಭಾವಿಸುವವರು ಮತ್ತು ಸಂಸಾರದಲ್ಲಿ ಬಿಗಿಪ್ಪೆ ಹೊಂದಿದವರು ಇಂದೇ ಡಾ || ಮೋತಿಯವರ ಬಲಹೆ ಪಡೆಯಿರಿ.

ಇವರು ನಂಗಳ ದೌರ್ಬಲ್ಯ, ಅತಿ ಮೂತ್ರ, ಸ್ವಪ್ನಸ್ಖಲನ, ಸ್ತ್ರೀಯಾ ಪುರುಷ ಸಾಮರ್ಥದ ತೊಂದರೆ, ಮತ್ತು ಇದೇ ರೀತಿಯ ಸಕಲ ಗುಪ್ತ ರೋಗಗಳನ್ನೂ ಪೂರ್ಣ ಗುಣಪಡಿಸುವರು

ಜನತಾ ಡಿಸ್ಪೆನ್ಸರಿ

ಪ್ರತಿದಿನವೂ } ಬೆಳಿಗ್ಗೆ 10 ರಿಂದ 1
ಭೇಟಿಯ ಕಾಲ } ಸಂಜೆ 4 ರಿಂದ 8

ಹೆಡ್ ಆಫೀಸ್ :

ಸುಬೇದಾರ್ ಛತ್ರಂ ರೋಡ್

ಬೆಂಗಳೂರು 9 : ಫೋನ್ ನಂಬರ್ 75332.

ಭೂತ್ತಿ

ಹಿಂದೆ ಭೂತಿಯು ಅತ್ಯಂತ ಧನವಂತ ತಾಂ ವಸ್ತುವಾಗಿತ್ತು : ಪುರಾತನ ರೋಮ ನಗರದಲ್ಲಿ ಇಡೀ ರಾಜ್ಯದಲ್ಲಿ ಕೇವಲ ಕೆಲವೇ ಜನರಿಗೆ ಮಾತ್ರವೇ ಕೊಡೆಗಳನ್ನು ಬಳಸುವ ಅಧಿಕಾರವಿತ್ತು : ಸಾಮ್ರಾಟ ಹೇಲಿಯೋಗೊಬಲ್ ಹಿನ್ನದ ಭೂತ್ತಿಯನ್ನು ಬಳಸುತ್ತಿದ್ದನು : ಈ ಭೂತ್ತಿಯಲ್ಲಿ ವಜ್ರ ವೈಢೂರ್ಯಗಳನ್ನು ಹುದುಗಿಸಿಡಲಾಗಿತ್ತು :

ನಾಳೆಯ ಪಂಚಾಂಗ

ದೈವಜ್ಞ ವಿಜಾವಣಿ

ಅಸ್ಥಾನವುಪಾಧ್ಯಾಧಿಕಾರಿ
ಜ್ಯೋತಿಷಿಕಾರ್ಯಾಸಕ್ತ, ಜ್ಯೋತಿರ್ವಿದ್ವನ್ಮಣಿ
ಸುಪಕ್ಷ ಕೃಷ್ಣ ಜೋಯಿಸರಂಡ

25 ಶನಿ ಅಮಾ (ಬಿ 8-56) ಉತ್ತ

ಮಹಾಲಯ ಅವಮಾವಾಸ್ಯೆ ರಜಕ್ಕಾಗಿ

ಹಾಳೆ ಪತ್ರಾದಿ ಪ್ರಕಟಿಸಲ್ಪಡುವುದಿಲ್ಲ

ಕದನದಲ್ಲಿ

ನವದೆಹಲಿ — ಸೆಪ್ಟಂಬರ್ 19 ರವರೆಗೆ ಕೊಲ್ಲಲ್ಪಟ್ಟ ಮತ್ತು ಬಂಧನಕ್ಕೊಳಪಟ್ಟವರು ಪಾಕಿಸ್ತಾನಿಕರು 4089 — ಸೆಪ್ಟಂಬರ್ 21 ಮಧ್ಯರಾತ್ರಿವರಿಗೆ 1157 ಭಾರತೀಯ ಸೈನಿಕರು ಕೊಲ್ಲಲ್ಪಟ್ಟರು.

ಶಾಂತಿ ನೆಲೆಸಲು

ಒಟಾವಾ — ಪಾಕಿಸ್ತಾನವು ಹೆಚ್ಚು ಸ್ಥಳ ನಂಗಳವನ್ನು ದುರಾಶೆಯಿಂದ ಬಯಸದೆ ಭಾರತ-ಪಾಕ್ ಶಾಂತಿ ನೆಲೆಸುವುದೆಂದು ಕಾಶ್ಮೀರದ ಮಂತ್ರಿ ಸಯದ್ ಎಸ್ಸಾರ್ ಕ್ವಾಸಿಂ ಹೇಳಿದರು.

ವಸ್ತು ಗೋವಾ

ನವದೆಹಲಿ — ಗೋವಾ ವಿಷಯು ಬೇಗನೇ ಇತ್ಯರ್ಥವಾಗಲೆಂದು ವಿರೋಧ ಪಕ್ಷದ ನಾಯಕರು ಲೋಕಸಭೆಯಲ್ಲಿ ಹೇಳಿದರು.

ಸೋಲು

ಭಾರತಕ್ಕೆ ಅಮೆರಿಕಾ ನೆರವಿನ ಬಟ್ಟು ರೂ 92-3 ಕೋಟಿಗಳ ಎರಡು ಸಾಲಕ್ಕೆ ಅಜುವಾಗಿದೆಯೆಂದು ರಾಜ್ಯಸಭೆಯಲ್ಲಿ ತಿಳಿಸಲಾಯಿತು

ಕಳ್ಳನ ಸಾವು

ಹಾವೇರಿ — ಇಲ್ಲಿಗೆ ಹತ್ತಿರದಲ್ಲಿ ಒಂದು ಹಗೇವಿನಲ್ಲಿದ್ದ ಜೋಳವನ್ನು ಕದಿಯಲು ಇಳಿದ ರಾಜೇನಹಳ್ಳಿ ಹನುಮಂತಪ್ಪನು ಅಲ್ಲಿನ ವಿಷಪೂರಿತ ಗಾಳಿಯಿಂದ ಅಲ್ಲೇ ಸತ್ತುಹೋದನು

ಓಡ ಗಡೆಯಿಲ್ಲ

ನವದೆಹಲಿ — ಸೇಳ್ ಅಬ್ದುರನ್ನು ಎಷ್ಟು ಕಾಲದಲ್ಲಿ ಬಂಧನದಲ್ಲಿ ಇಟ್ಟಿರಬೇಕೋ ಅಷ್ಟು ವರೆಗೆ ಇಟ್ಟಿರಲಾಗುವುದೆಂದು ಲೋಕಸಭೆಯಲ್ಲಿ ತಿಳಿಸಲಾಯಿತು

ಪಾಕೀಸ್ತಾನಕ್ಕೆ ಎಚ್ಚರಿಕೆ

— ರಷ್ಯ

ಪ್ರಮುಖ ವಾರ್ತೆಗಳು

ಪ್ರಧಾನಿ ಶಾಸ್ತ್ರಿಯವರು ನಿನ್ನೆ ಆಕಾಶವಾಣಿಯಲ್ಲಿ ದೇಶದ ಜನತೆಯನ್ನುದ್ದೇಶಿಸಿ ಭಾಷಣ ಮಾಡಿದರು. ಜಮ್ಮು ಮತ್ತು ಕಾಶ್ಮೀರ ಅಥವಾ ಭಾರತದ ಇತರ ಯಾವುದೇ ಭಾಗದ ಮೇಲೆ ಪಾಕೀಸ್ತಾನ ದಾಳಿ ಮಾಡಿದರೆ ಅದಕ್ಕೆ ಪ್ರತಿಯಾಗಿ ನಾವು ಪೂರ್ಣ ನಿರ್ಧಾರ ಹಾಗೂ ಬಲದಿಂದ ಎದುರಿಸುತ್ತೇವೆ ಎಂದರು

ಭಂಗಾದ ನಿಯಂತ್ರಣ ಅಜ್ಜಿ ಇರುವುದೆಂದು ಹಣಕಾಸು ಮಂತ್ರಿ ಶ್ರೀ ಟಿ. ಟಿ ಕೃಷ್ಣಮಾಚಾರಿಯವರು ಲೋಕಸಭೆಯಲ್ಲಿ ತಿಳಿಸಿದರು

ಸಣ್ಣ ಕಾರು ತಯಾರಿಕೆ ಯೋಜನೆ ಒಂದು ರೂಪಕ್ಕೆ ಬರುವುದಾಗಿ ಬೆಂಗಳೂರು ವಾರ್ತೆ

ಭಾರತ ಹಾಗೂ ಪಾಕೀಸ್ತಾನಗಳಲ್ಲಿರುವ ನಿಂತೂ ಪ್ರಜ್ಞನ್ನ ಯುದ್ಧ ಮುಂದುವರಿಯುವುದೆಂದು ಸ್ವತಂತ್ರ ಪಕ್ಷದ ನಾಯಕ ಶ್ರೀ ಸಿ ರಾಜಗೋಪಾಲಾಚಾರಿ ಮದ್ರಾಸಿನಲ್ಲಿ ತಿಳಿಸಿದರು

ಇನ್ನೂ ಹೋರಾಟವು ನಿಂತಿಲ್ಲವೆಂದು ಶಿಕ್ಷಣ ಮಂತ್ರಿ ಶ್ರೀ ಚಾಗಲಾ ನವದೆಹಲಿಯಲ್ಲಿ ತಿಳಿಸಿದರು

★

ಸತ್ಕಾರ ಕೂಟ

ಮಹಾರಾಷ್ಟ್ರದ ಸಾಂಸ್ಕೃತಿಕ ನಿಯೋಗ ಗೌವಾರ್ಧ ಮೈಸೂರು ಪೌರಸಭೆ ಈ ಬೆಳಿಗ್ಗೆ ಸತ್ಕಾರಕೂಟ ಏರ್ಪಡಿಸಿತ್ತು. ಶ್ರೀ ಕರಾ ಮುಲ್ಕಿರವರು ಸ್ವಾಗತಿಸಿದರು. ನಿಯೋಗದ ಪಂಡಿತರಾಗಿ ಇನಾಂದಾರರು ಸಾಹಿತಿಗಳು ಪುಂಸಭಾಧ್ಯಕ್ಷರಾದ ಶ್ರೀ ಪೆಂಡಲಿಂಗಯ್ಯನವರ ವಂದನಾರ್ಪಣೆ ನಡೆಯಿತು

ಶಾಸ್ತ್ರಿ — ಅಯೂಬ್ ಭೇಟಿ

ನವದೆಹಲಿ — ರಷ್ಯಾರಾಜ್ಯದಲ್ಲಿ ಪ್ರಧಾನಿ ಶಾಸ್ತ್ರಿಗಳವರು ಅಧ್ಯಕ್ಷ ಅಯೂಬರ ಸಮ್ಮೇಳನಕ್ಕೆ ಏರ್ಪಾಕೊಟ್ಟ ಕರೆಯನ್ನು ಭಾರತ ಸ್ವೀಕರಿಸಿದೆ.

★

ಮಳೆ ಹಾವಳಿ

ಕೈದರಾಬಾದು — ವಿಪರೀತ ಮಳೆ ಹಾವಳಿಯಿಂದ 1000 ಗುಡಿಸಲುಗಳು ನೀರಿನಲ್ಲಿ ನಿಂತು 3 ಸಾವಿರ ಜನರು ಮನೆ ಮಠಗಳಿಲ್ಲದವರಾಗಿದ್ದಾರೆ

★

ಸಿಲೋನಿನಿಂದ ಬಂದವರು

ನವದೆಹಲಿ — 6 ತಿಂಗಳಲ್ಲಿ ಸಿಲೋನಿನಿಂದ 1400 ಕ್ಕೂ ಹೆಚ್ಚು ಜನ ಭಾರತ ಮೂಲದ ಜನರು ಬಂದಿರುವರು

★

ಚೀನೀಯರು

ನಾಥುಲ — ಸಿಕ್ಕಿಂಗಡಿಯಲ್ಲಿ ಚೀನೀಯರು ಕಂದಕ ತೋಡುತ್ತಿರುವರೆಂದು ವಂದಿಯಾಗಿದೆ.

★

ಅಣು ಶಸ್ತ್ರಾಸ್ತ್ರ

ನವದೆಹಲಿ — ಭಾರತವು ತನ್ನದೇಅದ ಅಣುಶಸ್ತ್ರಾಸ್ತ್ರಗಳನ್ನು ತಯಾರಿಸಬೇಕೆಂದು ಕಾಂಗ್ರೆಸ್, ಪಿಎಸ್ಪಿ ಸ್ವತಂತ್ರ ಪಾರ್ಟಿಗಳ 100 ಮಂದಿ ಸದಸ್ಯರು ಪ್ರಧಾನಿಗಳಿಗೆ ಬರೆದಿರುವ ಕಾಗದದಲ್ಲಿ ಒತ್ತಾಯ ಮಾಡಿದ್ದಾರೆ

ಶುಭಾ ಸುದಿನ

ವಿಶ್ವಸಂಸ್ಥೆ — ಭಾರತ-ಪಾಕ್ ಕದನ ವಿರಾಮವು, ವಿಶ್ವಸಂಸ್ಥೆಗೆ ಇದೊಂದು ಶುಭಾಸುದಿನವೆಂದು ಅನೇಕ ಶಾಂತಿ ಪ್ರತಿನಿಧಿಗಳೂ ಹೇಳಿದರು

ಪೂರ್ವ ಕರ್ಮ ವಿಪಾಕವು

ಲೇಖಕರು:- ಎ ನ ಅಯ್ಯಂಗಾರ್, ಹೊಂಗನೂರು

*

[ಮುಂದುವರಿದುದು]

ಜನ್ಮಾಂತರದಲ್ಲಿ ಗೋಘಾತವನ್ನು ಮಾಡಿದವನು ಕುಷ್ಠರೋಗವುಳ್ಳವನಾಗುತ್ತಾನೆ. ಈ ಪಾಪಪರಿಹಾರಕ್ಕೆ ಚಾಂದ್ರಾಯಣ ವ್ರತವನ್ನೂ, ಕೃಚ್ಛ್ರ ಚಾಂದ್ರಾಯಣ ಪ್ರಕಾರವನ್ನೂ, ತಪ್ತಕೃಚ್ಛ್ರವನ್ನೂ, ಸೌಮಂತ್ರ ಜಪವನ್ನೂ ಮಾಡಬೇಕು.

ಯಾವನು ಮಾತಾಪಿತೃಗಳ ವಿಷಯದಲ್ಲಿ ನೀಚಭಾವನೆ ಇಡುತ್ತಾನೋ ಅವನು ಕರ್ಣರೋಗವುಳ್ಳವನಾದಾಗ್ಲಿ, ಕಿವುಡುವುಳ್ಳವನಾಗಿಯಾದಾಗ್ಲಿ, ಅಥವಾ ಕಿವಿಗಳಲ್ಲಿ ಅಸಹ್ಯವಾದ ಶಬ್ದಗಳುಳ್ಳವನಾಗಿಯೂ ಇರುತ್ತಾನೆ; ಈ ಪಾಪ ಪರಿಹಾರಕ್ಕೆ ಕನಿಷ್ಠಪಕ್ಷ ಒಂಬಯಸ್ಸಾದವನಿಗೆ ೨೦ ವರ್ಷಗಳ ತೂಕದ ಚಿನ್ನವನ್ನು ದಾನ ಮಾಡಿ ನಂತರ ವಿಷ್ಣುಪ್ರಕಾತಿಕಾಸ್ಯ ಮಂತ್ರಗಳನ್ನು ಯಥಾವಿಧಿಯಾಗಿ ಜಪ ಮಾಡಿದರೆ ಪರಿಹಾರವಾಗುತ್ತದೆ.

ಪೂರ್ವಜನ್ಮದಲ್ಲಿ ಬ್ರಾಹ್ಮಣನಾಗಿದ್ದೂ ನಾಸ್ತಿಕಬುದ್ಧಿಯಿಂದ ಸಂಧ್ಯಾದಿ ನಿತ್ಯಕರ್ಮಗಳನ್ನು ಮಾಡದಿದ್ದನು ಕುಷ್ಠರೋಗವುಳ್ಳವನಾಗಿ ಹುಟ್ಟುತ್ತಾನೆ: ಈ ಪಾಪಪರಿಹಾರಕ್ಕೆ ೧೨ ಪಂಚತೊಲ ಚಿನ್ನವನ್ನು ದಾನಮಾಡಿ ಯಥಾಶಕ್ತಿ ಬ್ರಾಹ್ಮಣ ಭೋಜನಮಾಡಿಸಿ ತರುವಾಯ ಸೌಮಂತ್ರ ಜಪವಮಾಡಬೇಕು.

ಪಸ್ತ್ರೀಹಿತಳಾದ ಪಂಸ್ತ್ರೀಯನ್ನು ನೋಡಿದರೂ ಉದಯಾಸ್ತಮಾನ ಕಾಲಗಳಲ್ಲಿ ಸೂರ್ಯನನ್ನು ನೋಡಿದರೂ ನಪುಂಸಕುಲೆಯುಳ್ಳವನಾಗಿ ಜನಿಸುತ್ತಾನೆ. ಇದರಿಂದ ದಿಕ್ಕುಗಳನ್ನು ನೋಡಲು ಅಸಮರ್ಥನಾಗುತ್ತಾನೆ; ಈ ಪಾಪ ಪರಿಹಾರಕ್ಕೆ 'ವರ್ಷೋವೇದೇಹಿ' ಎಂಬ ಮಂತ್ರವನ್ನು ಯಥಾವಿಧಿಯಾಗಿ ಲಂ ಸಾವಿರ ಸಾರಿ ಜಪಿಸಿ ನಂತರ 'ವಯಂಸ್ಯಪರ್ಣಾ' ಎಂಬ ಮಂತ್ರದಿಂದ ಅಭಿಷೇಕ ಮಾಡಿಸಿಕೊಂಡರೆ ಸುಖಪಡುತ್ತಾನೆ.

ಅನ್ಯರಿಗೆ ಸಂತಾಪವನ್ನುಂಟುಮಾಡಿದ ಮನುಷ್ಯನಿಗೆ ಶೂಲರೋಗವು ಸಂಪ್ರಾಪ್ತಿಯಾಗುತ್ತದೆ: ಇದು ಪರಿಹಾರವಾಗುವುದಕ್ಕೆ ಬ್ರಾಹ್ಮಣ ಸಂತರ್ಪಣೆ ಮಾಡಿ ಇದ್ರಮಂತ್ರವನ್ನು ಜಪಿಸಬೇಕು.

ದೇವಕ್ಷೇತ್ರ, ಬ್ರಾಹ್ಮಣಕ್ಷೇತ್ರ, ಕಟಾಕ್ಷ, ಹಸ್ತ, ಭೂಮಿ ಮೊದಲಾದ ದ್ರವ್ಯಗಳನ್ನು ನಾಶಮಾಡುತ್ತಿರುವ ಮನುಷ್ಯನನ್ನು ವಾಯುವು ಎಂಬ ಗ್ರಹವು ಹಿಡಿಯುವುದು ; ಅದರಿಂದ ಅಧರ್ಮತ್ವ, ಉದಾವರ್ತ, ಆಮಜ್ಞಿ, ಪಾದದಾಹ ಮುಂತಾದುವು ಪ್ರಾಪ್ತಿಯಾಗುತ್ತದೆ

ಗೋವನ್ನು ದ್ವೇಷಿಸಿದವನು ಗುಲ್ಮರೋಗ ಹೊಂದುತ್ತಾನೆ ; ಅದು ಪರಿಹಾರವಾಗಬೇಕಾದರೆ ೧೧ ತಿಂಗಳು ಪಯೋವ್ರತವನ್ನು ಮಾಡಬೇಕು.

— 'ವೈದ್ಯಚಿಂತಾಮಣಿ' ಗ್ರಂಥದಿಂದ ಸಂಗ್ರಹಿಸಲಾಗಿದೆ

ಗೋರಕ್ಷಣೆಯ ವಿಷಯವಾಗಿ ಪ್ರಕಾಶಿತವಾಗಿರುವ ಪುಸ್ತಕಗಳು ಹೆಚ್ಚಿಗಾಗಿ ಸಿಗಲಿ

*

Help The Gorakshana

*

ಸಹಾಯಧನ ರೂ 10, ಪ್ರೋತ್ಸಾಹಕರು ರೂ 25 ; (ಒಂದು ಸಾರಿಯಷ್ಟೆ)

ಗೋರಕ್ಷಣೆಗೆ ಲೇಖನಗಳನ್ನೂ ಪ್ರೋತ್ಸಾಹ ಧನವನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಿಳಾಸ:— ಗೋರಕ್ಷಣ ಆಫೀಸು, ಚಾಮರಾಜಪುರಂ, ಮೈಸೂರು 4

ಪುಡಲಾಂಡ್ಸ್ 24-9-65 ರಿಂದ
ಶಿ ಸ್ ಅಮೋಘ ಆರಂಭ

ಆವೊ ಪ್ಯಾರ್ ಕರೆ (ಹಿಂದಿ)
ಶಿ
Aao Pyar Karen

ಶ್ರೀಯುತ ಮುಖರ್ಜಿ — ಸೈರಾ ಬಾನು ಇವರ ಕಲಾತ್ಮಕ ನೃತ್ಯ
ಆಕರ್ಷಣೀಯ ಅಭಿನಯದಿಂದ ಕೂಡಿದ ಸುಂದರ ಹಿಂದಿ ಚಿತ್ರ
ಪ್ರತಿ ದಿನ 3 ಪ್ರದರ್ಶನಗಳು

ಅಪೆರ— ಅಮೋಘ 4 ನೇ ವಾರ
ವೀರ ಅಭಿಮನು (ತೆಲುಗು)
ಶ
ಕೃತಜ್ಞ — ಎಸ್ ಟಿ ರಾಮರಾವ್, ಕಾಂಚನ, ಕಾಂತಾರಾವ್, ರಾಜನಾಲ
ಪದ್ಮನಾಭಂ, ಸೋಮಯಾಜುಲು, ಜಿ ವಂಲಕ್ಷ್ಮಿ | ದಿನ 3 ಆಟಗಳು

SHAKTI
SUDHA

A Superb Tonic

ಅಶೋಕ ಏಜೆನ್ಸೀಸ್
ಲಕ್ಷ್ಮೀನರಸಿಂಹ ಬಿಲ್ಡಿಂಗ್ಸ್, ಮೈಸೂರು
ಎಲ್ಲ ವಿಧದ ಆಯುರ್ವೇದ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ
ರೋಗಿಗಳಿಗೆ ಸೂಕ್ತ ಔಷಧಿ ಕೊಡಲಾಗುತ್ತದೆ

Quality Printing — Neat Binding
Lakshminarasimha Press
Sivarampet, Mysore

Protect the Cow
ಗೋರಕ್ಷಣೆಗೆ ಬೆಂಬಲ ನೀಡಿ
ಶ್ರೀ ದ್ವಾರಕಾ ಜಗದ್ಗುರು ಮಹಾಸ್ವಾಮಿಗಳವರ, ಶ್ರೀ ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳವರ ಉದಾತ್ತ ಅನುಗ್ರಹ ಕೃಪೆಯಾಗಿದೆ
ಕನ್ನಡನಾಡಿನಲ್ಲಿ ಗೋರಕ್ಷಣೆ, ಪಶ್ಚಿಮದಯೆ, ತಾಮಸಾಹಾರ, ಪಶುವೈದ್ಯ ವಿಚಾರಗಳಿಂದ ಕೂಡಿದ ಏಕೈಕ ಪ್ರಚಾರ ಪತ್ರಿಕೆ ; ವಾರ್ಷಿಕ ಚಂದ 50 ನ್ಯೆಪೆ

Edited, Printed & Published by Dharma prachara nitratha
M S Krishna Rao (Proprietor) at the Satvavadi Press
Chamarajapuram, Mysore 4